ಆಸ್ಪತ್ರೆಗಳಿಗೆ ಯಂತ್ರೋಪಕರಣಗಳನ್ನು ಒದಗಿಸಿರುವ ಬಗ್ಗೆ

913 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ರಿಂದ 31-7-95ವರೆಗೆ ರಾಜ್ಯದಲ್ಲಿ ಆಸ್ಪತ್ರೆಗಳಿಗಾಗಿ ಯಂತ್ರೋಪಕರಣಗಳನ್ನು ಒದಗಿಸಲಾಗಿರುವುದು ಯಾವಾಗ

ಆ) ಒಟ್ಟು ಖರೀದಿಸಿರುವ ಯಂತ್ರೋಪಕರಣಗಳು ಎಷ್ಟು; ನೇರವಾಗಿ ಕಂಪನಿಗಳಿಂದ ಖರೀದಿಸಿರುವ ಯಂತ್ರೋಪಕರಣಗಳೆಷ್ಟು;

ಇ) ಖಾಸಗೀ ಏಜನ್ಸಿ ಮುಖಾಂತರ ಖರೀದಿಸಿರುವ ಯಂತ್ರೋಪಕರಣಗಳೆಷ್ಟು; ಖರೀದಿಸಿರುವ ಯಂತ್ರೋಪಕರಣಗಳಿಗೆ ಬೇಡಿಕೆ ಇತ್ತೆ;

ಈ) ಒಟ್ಟು ಎಷ್ಟು ಮೌಲ್ಯದ ಯಂತ್ರೋಪಕರಣಗಳನ್ನು ಖರೀದಿಸಲಾಗಿದೆ;

ಉ) ಆಸ್ಪತ್ರೆಯ ಅವಶ್ಯಕತೆಗಳಿಗೆ ತಕ್ಕಂತೆ ಔಷಧಿ ನೀಡಲಾಗುತ್ತಿದೆಯೇ?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1995ನೇ ಏಪ್ರಿಲ್ 1ರಿಂದ ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಯಂತ್ರೋಪಪಕರಣಗಳನ್ನು ಸರಬರಾಜು ಮಾಡಲು ದರಗುತ್ತಿಗೆ ಸಂಸ್ಥೆಗಳಿಗೆ ಆದೇಶ ನೀಡಲಾಗಿದೆ. ಹಾಗೂ ಸಣ್ಣಪುಟ್ಟ ಉಪಕರಣಗಳನ್ನು ಖರೀಧಿಸಲು ತಲಾ 25,000-00 ರೂ.ಗಳಂತೆ ಆಸ್ಪತ್ರೆಗಳಿಗೆ ಆಯವ್ಯಯ ಬಿಡುಗಡೆ ಮಾಡಲಾಗಿದೆ.

ಆ) ಎಂಟು (8)

ಎಂಟು (8)

ಇ) ಖಾಸಗೀ ಏಜನ್ಸಿ ಮುಖಾಂತರ ಖರೀದಿಸಿದ ಯಂತ್ರೋಪಕರಣಗಳು - 8

ಬೇಡಿಕೆ ಇತ್ತು.

ಈ) ರೂ. 50,83,632-00

ಉ) ಹೌದು.

ಬಂಟ್ವಾಳ ತಾಲ್ಲೂಕಿನ ಕ್ರೀಡಾಂಗಣ ನಿರ್ಮಾಣ

917 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಂಟ್ವಾಳ ತಾಲ್ಲೂಕಿಗೆ ಕ್ರೀಡಾಂಗಣ ಮಂಜೂರಾಗಿದೆಯೇ?

2) *ಆಗಿದ್ದಲ್ಲಿ ಜಮೀನು ಆಯ್ದು ಆಗಿದೆಯೇ? ಯಾವಾಗ ಕಾಮಗಾರಿ ಕೆಲಸ ಪ್ರಾರಂಭ ಮಾಡಲಾಗುವುದು?*

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

1) ಹೌದು

2) ಜಮೀನು ಆಯ್ಕೆಯಾಗಿದೆ. ಈ ಜಮೀನಿನ ಬಗ್ಗೆ ನ್ಯಾಯಾಲಯದಲ್ಲಿ ತಡೆ ಆಜ್ಞೆ ನೀಡಿರುವುದರಿಂದ ತಡೆ ಆಜ್ಞೆ ರದ್ದು ಆದ ನಂತರ ಕಾಮಗಾರಿ ಪ್ರಾರಂಭ ಮಾಡಲಾಗುವುದು.

ಅನುದಾನಿತ ಕನ್ನಡ ನರ್ಸರಿ ಶಾಲೆಗಳ ಶಿಕ್ಷಕರುಗಳಿಗೆ ಪೂರ್ತಿ ಅನುದಾನ

919 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕನ್ನಡ ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು;

ಇ) ಈ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಶಿಕ್ಷಕರುಗಳಿಗೆ ಸರ್ಕಾರ ನೀಡುತ್ತಿರುವ ಶೇಕಡಾವಾರು ಅನುದಾನದ ಪ್ರಮಾಣವೆಷ್ಟು;

ಈ) ಈ ಶಾಲೆಗಳಿಗೆ ಶಿಕ್ಷಕರುಗಳ ನೇಮಕಾತಿಗಳನ್ನು ನಿಲ್ಲಿಸಿರುವುದು ನಿಜವಲ್ಲವೇ?

ಉ) ಈ ಎಲ್ಲಾ ಶಾಲೆಗಳ ಶಿಕ್ಷಕರುಗಳಿಗೆ ಸರ್ಕಾರ ಪೂರ್ತಿ ಅನುದಾನ ನೀಡುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ?

ಊ) ಈ ಶಿಕ್ಷಕರುಗಳಿಗೆ ಟೈಮ್ ಬೌಂಡ್ ಇನ್‌ಕ್ರಿಮೆಂಟ್ ಹಾಗೂ ಗಳಿಕೆ ರಜಾ ಸೌಲಭ್ಯವನ್ನು ಒದಗಿಸಲು ಸರ್ಕಾರ ಆದೇಶ ನೀಡುವುದೇ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 370.

ಆ) 475.

ಇ) (ನಗರ).

ಹಳೇ ಮೈಸೂರು ಪ್ರದೇಶಕ್ಕೆ	ಶೇ. 50
ಗ್ರಾಮಾಂತರ ಪ್ರದೇಶಕ್ಕೆ	ಶೇ. 70
ಬಾಂಬೆ ಕರ್ನಾಟಕ ಪ್ರದೇಶಕ್ಕೆ	ಶೇ. 25

ಈ) ಹೌದು. ಇದು ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯಡಿಯಲ್ಲಿ ಬರುವುದಿಲ್ಲ,